# ಮಾತಿಗೆ ಸಿಕ್ಕ ಗಾಬರಿ ಗಮ್ಯಾ

**ಇಂಚರಾ ಶೆಟ್ಟಿ**

ಉದಯ 'ರಾಧಿಕಾ'ದ ಗಮ್ಯಾ

◆ **ಗಾಬರಿ ಗಮ್ಯಾ ಎಂದೇಕೆ ಕರೆಯುತ್ತಾರೆ?**

ಕಥೆಯಲ್ಲಿ ನನ್ನ ಹೆಸರು ಗಮ್ಯಾ. ನನ್ನ ನಡವಳಿಕೆ ವರ್ತನೆ ಬರೀ ಗಡಿಬಿಡಿಯಿಂದ ಕೂಡಿರುತ್ತದೆ. ನನ್ನಲ್ಲಿ ಇರುವ ಗಾಬರಿ ಮತ್ತು ಭೀತಿಯ ಕಾರಣಕ್ಕೆ ನನ್ನ ಹೆಸರಿಗೆ ಗಾಬರಿಯನ್ನು ಅನ್ವರ್ಥದಂತೆ ಬಳಸುತ್ತಾರೆ. ಹಾಗಾಗಿ ಎಲ್ಲರೂ ಗಾಬರಿ ಗಮ್ಯಾ ಎಂದೇ ಕರೆಯುತ್ತಾರೆ. ಈ ಪಾತ್ರ ನನ್ನ ವೈಯಕ್ತಿಕ ಸ್ವಭಾವಕ್ಕೆ ತುಂಬ ವಿರುದ್ಧವಾಗಿದೆ. ನಾನು ಯಾವತ್ತೂ ಈ ಪಾಟಿ ಭಯಪಡುವುದಿಲ್ಲ. ನನ್ನ ವ್ಯಕ್ತಿತ್ವಕ್ಕೆ ವಿರುದ್ಧವಾಗಿರುವ ಪಾತ್ರ ಬೇರೆಯ ಸವಾಲನ್ನು ಒಡ್ಡುತ್ತದೆ. ಅಭಿನಯಿಸಲು ತುಂಬ ಚೆನ್ನಾಗಿದೆ.

◆ **ಮೊದ ಮೊದಲು ಬಣ್ಣ ಹಚ್ಚಿದಾಗ ಹೇಗಿತ್ತು?**

ಉಷಾ ಭಂಡಾರಿ ಅವರ 'ಆಪ್' ಎಂಬ ಸಂಸ್ಥೆಯಲ್ಲಿ ಅಭಿನಯವನ್ನು ಕಲಿತೆ. ಅಲ್ಲಿ ನಾಟಕಗಳ ತಾಲೀಮು ಮಾಡಿ, ಕಲಿತ ಮೇಲೆ ಅದನ್ನು ಚಿತ್ರೀಕರಿಸುತ್ತಿದ್ದರು. ಸಾಮಾನ್ಯವಾಗಿ ಸರಳ ನಾಟಕಗಳು ಇರ್ತಾ ಇದ್ದವು. ಸೇತುರಾಮ್ ಅವರ 'ಅತೀತ' ಎಂಬ ನಾಟಕದಲ್ಲಿ ಮೂರು ಪೇಜಿನ ಡೈಲಾಗ್ ಇತ್ತು. ಅದನ್ನು ಹೇಳುವುದು ಕಷ್ಟ ಆಗಿತ್ತು. ಆಗ ಭಯ ಆಗುತ್ತಿತ್ತು, ಈಗ ಹಾಗೇನೂ ಇಲ್ಲ. ಗಿರೀಶ್ ಕಾಸರವಳ್ಳಿ ಅವರ 'ಮುಖಾಮುಖಿ' ಟೆಲಿಫಿಲ್ಮ್‌ನಲ್ಲಿ ಮುಖ್ಯಪಾತ್ರವನ್ನು ಮಾಡಿದ್ದೆ. ನಟಿಯಾಗಲು ನಾನು ಚಿಕ್ಕವಳಿದ್ದಾಗ ನಟಿ ಪ್ರೇಮಾ ಅವರ ಫೋಟೊ ತೋರಿಸಿ ನೀನು ಹೀಗೆ ಆಗಬೇಕು ಎಂದು ಅಮ್ಮ ಹೇಳುತ್ತಿದ್ದರು. ಆದರೂ ನಾನು ನಟಿ ಆಗಬೇಕು ಎಂದು ಯೋಚಿಸಿರಲಿಲ್ಲ. ಅದು ಎಲ್ಲೂ ಮನಸ್ಸಿನಲ್ಲಿ ಉಳಿದೆ. ನಮ್ಮ ಪೋಷಕರಿಗೂ ಅದು ಇಷ್ಟ ಇರಲಿಲ್ಲ. ಅವರಿಗೆ ಸಂಗೀತ ಕಲಿಸುವ ಉದ್ದೇಶ ಇತ್ತು. 'ಕೃಷ್ಣ ಸುಂದರಿ'ಗೆ ಆಡಿಷನ್ ನೀಡಿದೆ. ಆಗ ನಾನು ನಟನೆಯಲ್ಲಿ ಪಕ್ವವಾಗಬೇಕು ಎನ್ನುವ ಸತ್ಯ ಅರಿವೆಗೆ ಬಂತು. ಹಾಗಾಗಿ ನಟನೆಯನ್ನು ಕಲಿತೆ.

◆ **ಆಡಿಷನ್ ನೀಡುವ ದಿನಗಳು ಹೇಗಿದ್ದವು?**

ಅದು ತುಂಬ ಕಷ್ಟದ ಕೆಲಸ. ನನ್ನ ಕುಟುಂಬದವರ ವಿರೋಧದ ನಡುವೆ ನಾನು ಬಣ್ಣವನ್ನು ಹಚ್ಚಿದ್ದೆ. ತುಂಬ ಸಂಪ್ರದಾಯಸ್ಥ ಕುಟುಂಬ. ಅವರಿಗೆ ನಾನು ಗಾಯಕಿ ಆಗಬೇಕಿತ್ತು. ಕೋವಿಡ್ ನಂತರ ಆನ್‌ಲೈನ್ ತರಗತಿಗಳು ಆರಂಭವಾದವು. ನನ್ನೂರು ಚಿಕ್ಕಮಗಳೂರು ಜಿಲ್ಲೆ ಎನ್. ಆರ್.ಪುರ ತಾಲ್ಲೂಕಿನ ಕಟ್ಟಿನಮನಿ ಎಂಬ ಹಳ್ಳಿ. ನೆಟ್‌ವರ್ಕ್ ಸಮಸ್ಯೆಯಿಂದ ಆನ್‌ಲೈನ್ ಕ್ಲಾಸ್ ಅರ್ಧಕ್ಕರ್ಧ ಮಿಸ್ ಆಯಿತು. ಅಂತಿಮ ವರ್ಷದ ಬಿಕಾಂ ಮಂಗಳೂರಿನಲ್ಲಿ ಓದುತ್ತಿದ್ದೆ. ಆಗ ಪ್ರಿನ್ಸಿಪಾಲ್ ಅವರು ಭೇಟಿಯಾಗಿ ನನ್ನ ಪರಿಸ್ಥಿತಿ ಹೇಳಿದೆ. ನನಗೆ ಓದಲು ಆಗಿಲ್ಲ. ನಟನೆ ಕಲಿಯುವ ಆಸೆ ಇದೆ ಎಂದು ವಿನಂತಿಸಿದೆ. ನನ್ನ ಆಸಕ್ತಿಯನ್ನು ಪ್ರೋತ್ಸಾಹಿಸಿದರು. ನಟನೆಯಲ್ಲಿ ಒಳ್ಳೆಯದಾಗುತ್ತದೆ ಎನ್ನುವ ಭಾವನೆ ನನ್ನದು. ಅಂತಿಮ ವರ್ಷದ ಪರೀಕ್ಷೆ ಬಾಕಿ ಇದೆ. ಅದನ್ನು ಮುಂದುವರಿಸುತ್ತೇನೆ. ನನ್ನ ತಂದೆಗೆ ಓದು ನಿಲ್ಲಿಸಿದ್ದು ಇಷ್ಟ ಇರಲಿಲ್ಲ. ಒಂದು ವರ್ಷದ ಪ್ರಯತ್ನದ ಫಲದಿಂದ ಈ ಪಾತ್ರ ಸಿಕ್ಕಿದೆ. ಈಗ ಅವರಿಗೂ ಒಂದಿಷ್ಟು ಸಮಾಧಾನ ಆದಂತೆ ಇದೆ.

◆ **ನಿಮಗೆ ನಿರ್ದೇಶನ ಮಾಡಿ ಎಂದರೆ?**

ಸುಮಾರು ಜನ ಆ ರೀತಿ ಹೇಳಿದ್ದಾರೆ. ಪದವಿಯಲ್ಲಿ ಸಾಫ್ಟ್‌ಸ್ಕಿಲ್‌ಗೆ ಸಂಬಂಧಿಸಿದಂತೆ ಪಠ್ಯ ಇತ್ತು. ಸಾಮಾಜಿಕ ಕಾಳಜಿ ಇರುವ ಒಂದು ವಿಷಯ ಆಧರಿಸಿ ನಾವೇ ಕಿರುಚಿತ್ರ ರೂಪಿಸಬೇಕಿತ್ತು. ಪುರುಷ ದೌರ್ಜನ್ಯದ ಕುರಿತು ನಾನೇ ನಿರ್ದೇಶನ ಮಾಡಿದ್ದೆ. ಅದನ್ನು ಹೇಗೆ ಮಾಡಬೇಕು ಎನ್ನುವುದೂ ಗೊತ್ತಿರಲಿಲ್ಲ. ಕ್ಯಾಮೆರಾವನ್ನು ಬೇರೆ ಬೇರೆ ಆ್ಯಂಗಲ್‌ನಲ್ಲಿ ಹಿಡಿಯಬೇಕು ಎನ್ನುವುದೂ ಗೊತ್ತಿರಲಿಲ್ಲ. ಎಡಿಟ್ ಮಾಡಿಸುವಾಗ ಸ್ಕ್ರಿಪ್ಟ್ ಚೆನ್ನಾಗಿದೆ ಎಂದು ಹೇಳಿದರು. ಆ ಅನುಭವವನ್ನು ಪಡೆಯಲು– ತಾಂತ್ರಿಕವಾಗಿ ತಿಳಿದುಕೊಳ್ಳಲು ಸಹನಿರ್ದೇಶಕಿಯಾಗಿ ಅವಕಾಶ ಸಿಕ್ಕರೆ ಕೆಲಸ ಮಾಡಬೇಕು ಎನ್ನುವ ಆಸೆಯಿದೆ.

ನಟಿಯಾಗಿಯೇ ಬೆಳೆಯಬೇಕು. ಮುಂದೆ ಲೀಡ್ ಪಾತ್ರವನ್ನು ನಿರ್ವಹಿಸಬೇಕು ಎನ್ನುವ ಆಸೆಯೂ ಇದೆ. ಆ ನಿಟ್ಟಿನಲ್ಲಿ ಪ್ರಯತ್ನ ಮಾಡುತ್ತಿದ್ದೇನೆ. ಈ ಪ್ರಾಜೆಕ್ಟ್ ಮುಗಿದ ನಂತರ ನೋಡಬಹುದು ಎಂದುಕೊಂಡಿದ್ದೇನೆ. 'ರಾಧಿಕಾ' ರೀತಿಯದೇ ಒಂದು ಪಾತ್ರ ಆದರೆ ಒಳ್ಳೆಯದು ಎಂದು ನಾನು ಅಂದುಕೊಂಡಿದ್ದೇನೆ.



■ **ರಾಘವೇಂದ್ರ ಕೆ.**